ನಾಶವಾದರೆ, ಆಗ ಸ್ವಪ್ನದಲ್ಲಿಯೂ ಆತ್ಮಸ್ವರೂಪವನ್ನು ಪ್ರತ್ಯಕ್ಷತಃ ಸಾಕ್ಷಾತ್ಕರಿಸಿಕೊಳ್ಳಬಹುದು."ನಾನೇ ಇದೆಲ್ಲ, ನಾನೇ ಬ್ರಹ್ಮ. ನನಗಿಂತ ಬೇರೆ ಯಾವುದೂ ಇಲ್ಲ" ಎಂಬ ಅದ್ವಿತೀಯ ದರ್ಶನದಿಂದ ಜಾಗೃತಾವಸ್ಥೆಯಲ್ಲಿಯೂ ಅದೇ ಅನುಭವವನ್ನು ಹೊಂದಬಹುದು. ಇದೇ ಪರಮಾರ್ಥ ದರ್ಶನ. ಇದು ಅವಿದ್ಯೆಯಿಂದ ಹುಟ್ಟಿದ್ದಲ್ಲ. ಆಗ ನಾವು ಬಾಹ್ಯವಾದದ್ದನ್ನಾಗಲಿ, ಆಂತರಿಕವಾದದ್ದನ್ನಾಗಲಿ ಕಾಣುವುದಿಲ್ಲ. ಕಾಣುವುದೊಂದೇ ಒಂದು. ಅದೇ ಆತ್ಮ, ಅದೇ ಬ್ರಹ್ಮ.

ಯಥಾಕಾರೀ ಯಥಾಚಾರೀ ತಥಾ ಭವತಿ ಎಂಬುದೇ ಬದುಕಿನ ಸೂತ್ರ. ನಾವು ನಿಯತವಾಗಿ ಶಾಸ್ತ್ರವಿಹಿತವಾದ ವಿಧಿಯನ್ನು ಪಾಲಿಸುತ್ತ, ನಿಷೇಧವನ್ನು ದೂರವಿಟ್ಟಿರುವ ಕ್ರಿಯೆಯೇ ಯಥಾಕಾರೀ. 'ಯಥಾಚಾರೀ' ಎಂದರೆ ಅನಿಯಂತ್ರಿತ ಕ್ರಿಯೆಗಳು. ನಮ್ಮ ಕ್ರಿಯೆಯೇ ನಮಗೆ ಅನುಗುಣವಾದ ಫಲವನ್ನು ನಿಡುತ್ತದೆ. **ಸಾಧುಕಾರೀ ಸಾಧುರ್ಭವತಿ** – ಸತ್ಕರ್ಮ ನಿರತನಾದವನು ಸೌಜನ್ಯಶೀಲನಾಗುತ್ತಾನೆ, ಉನ್ನತೋನ್ನತ ಬದುಕನ್ನು ಪಡೆಯುತ್ತಾನೆ. **ಪಾಪಕಾರೀ ಪಾಪೋ ಭವತಿ** – ದುಷ್ಟಕರ್ಮ ನಿರತನಾದರೆ ಅವನತಿಯತ್ತ ಸಾಗುತ್ತಾನೆ. **ಪುಣ್ಯಃ ಪುಣ್ಯೇನ ಕರ್ಮಣಾ ಭವತಿ ಪಾಪಃ ಪಾಪೇನ** – ನಾವು ನೆರವೇರಿಸುವ ಪುಣ್ಯಕರ್ಮಗಳ ಪುನರಾವೃತ್ತಿಯಿಂದ ಜೀವನೋತ್ಕರ್ಷ ಸಾಧ್ಯವಾಗುತ್ತದೆ, ಪಾಪಕರ್ಮದ ಆವೃತ್ತಿಯಿಂದ ಜೀವನಾಪಕರ್ಷ ಅನಿವಾರ್ಯವಾಗುತ್ತದೆ. ಆದ್ದರಿಂದ ಪುಣ್ಯಕರ್ಮವನ್ನು ಎಡೆಬಿಡದೇ ಅನುವರ್ತಿಸುವುದೇ ಯಶಸ್ಸಿನ ಮಾರ್ಗ. ಇದೇ ವಿಮೋಚನೆಯ ಹಾದಿ ಎಂಬುದು ಯಾಜ್ಞವಲ್ಕ್ಯರ ಉಪದೇಶ.

ಈ ಉಪನಿಷತ್ತಿನಲ್ಲಿ ಕಂಡುಬರುವ ಇನ್ನೊಂದು ಸಂವಾದ ಯಾಜ್ಞವಲ್ಕ್ಯ ಹಾಗೂ ಅವರ ಮೆಚ್ಚಿನ ಮಡದಿ ಮೈತ್ರೇಯಿಯೊಡನೆ ನಡೆಯುತ್ತದೆ. ಯಾಜ್ಞವಲ್ಕ್ಯರಿಗೆ ಮೈತ್ರೇಯಿ ಮತ್ತು ಕಾತ್ಯಾಯಿನಿ ಎಂಬ ಇಬ್ಬರು ಪತ್ನಿಯರು. ಇವರಲ್ಲಿ ಮೈತ್ರೇಯಿ ಬ್ರಹ್ಮವಾದಿನಿ. ಕಾತ್ಯಾಯಿನಿ ಸಾಮಾನ್ಯ ಸ್ತ್ರೀಯರಂತೆ ಸಂಸಾರದ ನಿರ್ವಹಣೆಗೆ ಬೇಕಾದ ಪ್ರಯೋಜನಾಪೇಕ್ಷೆಯುಳ್ಳ ಸ್ತ್ರೀಪ್ರಜ್ಞಳು. ಸಂಸಾರದಲ್ಲಿ ವಿರಕ್ತಿ ಉಂಟಾದಾಗ ಯಾಜ್ಞವಲ್ಕ್ಯರು ಮೈತ್ರೇಯಿಯನ್ನು ಕರೆದು, "ನಾನು ಸಂನ್ಯಾಸ ಸ್ವೀಕರಿಸುವೆನು. ನನ್ನ ಕರ್ತವ್ಯದಂತೆ ಆಸ್ತಿಗಳನ್ನು ವಿಭಜಿಸಿ ನಿನಗೂ ಕಾತ್ಯಾಯಿನಿಗೂ ನೀಡುವೆನು" ಎನ್ನುತ್ತಾರೆ. ಆಗ ಅವರಿಬ್ಬರಲ್ಲಿ ನಡೆದ ಸಂವಾದ ಹೀಗಿದೆ.

ಮೈತ್ರೇಯಿ : ಸರ್ವಸಂಪತ್ತುಗಳಿಂದ ಪರಿಪೂರ್ಣವಾದ ಈ ಭೂಮಿಯನ್ನು ನನಗೆ ನೀಡಿದರೆ ನಾನು ಅದರಿಂದ ಅಮರಳಾಗಲು ಸಾಧ್ಯವೇ ?

ಯಾಜ್ಞವಲ್ಕ್ಯ : ಇಲ್ಲ, ಇಲ್ಲ. ಸಾಧ್ಯವಿಲ್ಲ. ಸುಖಸಾಧನ ಸಾಮಗ್ರಿಗಳಿರುವ ಜನರ ಜೀವನ ಹೇಗೋ, ಹಾಗೆ ಜೀವಿಸಲು ಮಾತ್ರ ಸಾಧ್ಯ. **ಅಮೃತತ್ವಸ್ಯ ತು ನಾಶಾಸ್ತಿ ವಿತ್ತೇನ** – ಸಂಪತ್ತಿನಿಂದ ಅಮರತ್ವವನ್ನು ಆಶಿಸಲು ಸಾಧ್ಯವಿಲ್ಲ.

ಮೈತ್ರೇಯಿ : ಅಮರಳಾಗಲು ಸಾಧ್ಯವಿಲ್ಲವೆಂದರೆ ಸಂಪತ್ತನ್ನು ಪಡೆದು ನನಗೇನು ಪ್ರಯೋಜನ ? ತಾವು ಏನನ್ನು ತಿಳಿದು ಕೊಂಡಿರುವಿರೋ ಅದನ್ನೇ ನನಗೆ ತಿಳಿಸಿ.

ಯಾಜ್ಞವಲ್ಕ್ಯ : ನೀನು ನನಗೆ ಅತ್ಯಂತ ಪ್ರೇಮಪಾತ್ರಳಾದ ಪತ್ನಿಯಲ್ಲವೇ? ನಿನಗೆ ಅದನ್ನು ವಿವರಿಸುತ್ತೇನೆ. ನಾನು ವಿವರಿಸುವ ವಿಷಯವನ್ನು ನೀನು ಏಕಾಗ್ರಚಿತ್ತದಿಂದ ಕೇಳು. ಅದನ್ನೇ ಧ್ಯಾನಿಸು. ನಮಗೆ ಪ್ರಿಯ ಯಾವುದು? ಗಂಡ, ಹೆಂಡತಿ, ಮಕ್ಕಳು, ಸಂಪತ್ತು, ಬ್ರಹ್ಮ, ಕ್ಷತ್ರ, ಲೋಕ, ದೇವ, ವೇದ, ಯಜ್ಞ, ಭೂತಗಳು – ಯೋಚಿಸು, ಇವು ಯಾವುದೇ ಇರಲಿ, **ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ** – ಈ ಎಲ್ಲವನ್ನೂ ಆತ್ಮನಿಗೋಸ್ಕರವೆಂದೇ ಪ್ರೀತಿಸುತ್ತೇವೆ. ಆದ್ದರಿಂದ ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಅದಕ್ಕಾಗಿ ಆತ್ಮವಿಷಯಕವಾದ ಅನೇಕ ನುಡಿಗಳನ್ನು ಕೇಳಬೇಕು. ಕೇಳಿದ ವಿಷಯಗಳನ್ನು ವಿಶ್ಲೇಷಿಸಿ ನಿರ್ಣಯಿಸಿಕೊಳ್ಳಬೇಕು, ನಿರ್ಣಯಿಸಿದ ವಿಷಯವನ್ನು ಧ್ಯಾನಿಸಬೇಕು. **ಮೈತ್ರೇಯೀ, ಆತ್ಮನಿ ವಾ ಅರೇ ದೃಷ್ಟೇ ಶ್ರುತೇ ಮತೇ ವಿಜ್ಞಾತೇ ಇದಂ ಸರ್ವಂ ವಿದಿತಮ್** – ಹೀಗೆ ಆತ್ಮನ ಬಗ್ಗೆ ಕೇಳಿ ಮಥಿಸಿ ಕಂಡುಕೊಂಡರೆ ತಿಳಿದುಕೊಳ್ಳಬೇಕಾದದ್ದನ್ನೆಲ್ಲ ತಿಳಿದುಕೊಂಡಂತೆ.

ಹೀಗೆ ಸಂವಾದಗಳ ಮೂಲಕ ಬೃಹದಾರಣ್ಯಕ ಉಪನಿಷತ್ತು ಗಹನವಾದ ವಿಷಯವನ್ನು ಆಮೂಲಾಗ್ರವಾಗಿ ನಿರೂಪಿಸುತ್ತದೆ ಹಾಗೂ ಇದರ ನಿರೂಪಣಾಶೈಲಿ ಸರಳವೂ, ಸುಂದರವೂ, ಸಮಗ್ರವೂ ಆಗಿದೆ.

ಬಾಯಿಯೊಳಗೆ ಹೋಗುವುದೇನು? ಹೊರಗಡೆ ಬರುವುದೇನು?

ಗಾಂಧೀಜಿಯವರು ಯಾವಾಗಲೂ ತಮ್ಮ ಟೇಬಲ್ ಮೇಲೆ ಮೂರು ಕೋತಿಗಳ ಮೂರ್ತಿಯನ್ನು ಇರಿಸಿಕೊಂಡ ವಿಚಾರ ಯಾರಿಗೆ ತಾನೇ ಗೊತ್ತಿಲ್ಲ? ಗಾಂಧೀಜಿಯವರಿಗೆ ಆ ಕೋತಿಗಳು, ತಮ್ಮ ಎರಡೂ ಕೈಗಳಿಂದ ಕಣ್ಣುಗಳನ್ನು, ಕಿವಿಗಳನ್ನು ಮತ್ತು ಬಾಯಿಯನ್ನು ಮುಚ್ಚಿಕೊಂಡು ಸದ್ದಿಲ್ಲದೆ ಸಂದೇಶವನ್ನು ಸಾರುತ್ತಿದ್ದವು. ಸಾಮಾನ್ಯವಾಗಿ ಎರಡು ಕಣ್ಣುಗಳನ್ನು ಮುಚ್ಚಿಕೊಳ್ಳಲು ಎರಡು ಕೈಗಳ ಆವಶ್ಯಕತೆ ಇದೆ. ಆದರೆ ಇರುವ ಒಂದು ಬಾಯಿ ಮುಚ್ಚಿಕೊಳ್ಳಲು ಎರಡು ಕೈಗಳು ಏಕೆ ಬೇಕು? ಉತ್ತರ ಬಹಳ ಸುಲಭ. ಒಂದು ಕೈ ಬಾಯಿಯನ್ನು ಮುಚ್ಚಿದರೆ ಮತ್ತೊಂದು ಕೈ ನಾಲಗೆಯನ್ನು ನಿಯಂತ್ರಿಸಲು ಇರಬೇಕು. ಆದ್ದರಿಂದ ತನ್ನ ಎರಡೂ ಕೈಗಳಿಂದ ಬಾಯಿ ಮುಚ್ಚಿಕೊಂಡಿರುವ ಕೋತಿ ಪ್ರಸ್ತುತ.

ಆಚಾರವಿರುವ ನಾಲಗೆ ಮತ್ತು ಪರಿಶುದ್ಧ ಆಹಾರದ ಕ್ರಮವನ್ನು ಅನುಸರಿಸಿದ್ದೇ ಆದರೆ, ಜೀವನ ಸುಲಭ ಮತ್ತು ನಿರಾಳವಾಗುತ್ತದೆ. ಆಹಾರದ ರೂಪದಲ್ಲಿ ಏನನ್ನು ಸೇವಿಸುತ್ತೇವೆ ಹಾಗೂ ಮಾತಿನ ಮೂಲಕ ಯಾವ ವಿಚಾರವನ್ನು ಹೊರಹಾಕುತ್ತೇವೆ ಎಂಬುದರ ಬಗ್ಗೆ ಸದಾ ಎಚ್ಚರ ಮತ್ತು ಗಮನ ಇದ್ದವರು ಎಲ್ಲೆಲ್ಲಿಯೂ ಸಲ್ಲುತ್ತಾರೆ ಹಾಗೂ ಎಲ್ಲರೂ ಮೆಚ್ಚುವ ವ್ಯಕ್ತಿತ್ವ ಅವರದಾಗುತ್ತದೆ. ಇಂದು ಗಾಂಧೀಜಿಯವರು ಬದುಕಿದ್ದರೆ, ಇಂದಿನ ಈ ಕೊಳಕು ರಾಜಕಾರಣ ಮತ್ತು ಅನಿಯಂತ್ರಿತ ಭ್ರಷ್ಟಾಚಾರದಿಂದ ಬೇಸತ್ತು, ಮೂಗು ಮುಚ್ಚಿಕುಳಿತಿರುವ ಮತ್ತೊಂದು ಕೋತಿಯ ಮಾದರಿಯನ್ನು ಇತರ ಮೂರು ಕೋತಿಗಳ ಪಕ್ಕದಲ್ಲಿ ಇರಿಸುತ್ತಿದ್ದರೋ ಏನೋ!

(ಡಾ. ಎ. ಆರ್. ಸೀತಾರಾಮ್, ಅನುವಾದ: ಎಸ್. ಶಿವಕುಮಾರ್)

ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ.ಆರ್. ಮೋಹನ್

ಛಾಯಾಚಿತ್ರ ೫೯ : ಚಿತ್ರ ೫೮ ನ್ನು ತೆಗೆದಾಗಲೇ ಈ ಚಿತ್ರವನ್ನೂ ತೆಗೆಯಲಾಗಿದೆ. ೧೮೯೭ ರ ಜನವರಿಯಲ್ಲಿ ಖ್ಯಾತ ಛಾಯಾಗ್ರಾಹಕರಾದ ಶ್ರೀ ಅಪ್ಪಾವನ್ ಮುದಲಿಯಾರ್ ಅವರು ಈ ಚಿತ್ರವನ್ನು ಸೆರೆಹಿಡಿದರು.



ಮುದಲಿಯಾರ್ ಚೆನ್ನೈ ನಗರದವರು; ದೈವಭಕ್ತರು ಕೂಡ. ಈ ಚಿತ್ರವನ್ನು ತೆಗೆಯುವ ವ್ಯವಸ್ಥೆಯನ್ನು ಸ್ವಾಮೀಜಿಯ ಅನುಯಾಯಿಗಳಾದ ಶ್ರೀ ಕೆ. ಸುಂದರರಾಮ ಅಯ್ಯರ್ ಅಥವಾ ಬಿಳಿಗಿರಿ ಅಯ್ಯಂಗಾರ್ ಮಾಡಿದ್ದಿರಬಹುದು.

ಛಾಯಾಚಿತ್ರ ೬೦ : ಈ ಗುಂಪು ಚಿತ್ರವನ್ನು ತೆಗೆದದ್ದು ಚೆನ್ನೈ ನಗರದ ಕ್ಯಾಸಲ್ ಕರ್ನನ್ ಅಥವಾ ವಿವೇಕಾನಂದ ಇಲ್ಲಂನಲ್ಲಿ. ಶ್ರೀ ಅಪ್ಪಾವನ್ ಮುದಲಿಯಾರ್ ಅವರೇ ಈ ಚಿತ್ರವನ್ನೂ ತೆಗೆದರು ಎಂದು ನಂಬಲಾಗಿದೆ. ಈ ಚಿತ್ರದಲ್ಲಿ ಇರುವವರು: **ಕುರ್ಚಿಯ ಮೇಲೆ ಕುಳಿತವರು:** (ಎಡದಿಂದ ಬಲಕ್ಕೆ) ತಾರಾಪದ (ಒಬ್ಬ ಸಂನ್ಯಾಸಿ), ಸ್ವಾಮಿ ಶಿವಾನಂದ, ಸ್ವಾಮಿ ವಿವೇಕಾನಂದ, ಸ್ವಾಮಿ ನಿರಂಜನಾನಂದ, ಸ್ವಾಮಿ ಸದಾನಂದ

ನಿಂತುಕೊಂಡಿರುವವರು: (ಎಡದಿಂದ ಬಲಕ್ಕೆ) : ಅಳಸಿಂಗ ಪೆರುಮಾಳ್, ಜೆ.ಜೆ. ಗುಡ್‌ವಿನ್, ಎಂ.ಎನ್. ಬ್ಯಾನರ್ಜಿ ಮತ್ತಿತರ ಸ್ಥಳೀಯ ಭಕ್ತರು

ಮುಂದೆ ಕುಳಿತುಕೊಂಡಿರುವವರು: (ಎಡದಿಂದ ಬಲಕ್ಕೆ): (ಎರಡನೆಯವರು) ಬಿಳಿಗಿರಿ ಅಯ್ಯಂಗಾರ್, (ನಾಲ್ಕನೆಯವರು) ಎಂ.ಸಿ. ನಂಜುಂಡರಾವ್

ಛಾಯಾಚಿತ್ರ ೬೧ : ಗುಂಪು ಚಿತ್ರ (೬೦) ರಿಂದ ಸ್ವಾಮೀಜಿಯವರನ್ನು ಬೇರ್ಪಡಿಸಿ ಈ ಚಿತ್ರವನ್ನು ಪ್ರಕಟಿಸಲಾಗಿದೆ. ಇಲ್ಲಿ ಸ್ವಾಮೀಜಿ ಭಾವಸಮಾಧಿಯಿಂದ